ದಿನಾಂಕಃ 29–11–2023 ಸಾಕ್ಷಿಯನ್ನು ಈ ದಿನ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಡಿ.ಕೆ.ಎನ್. ವಕೀಲರಿಂದಃ**

ಲೀಲಾವತಿ 1 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. 1 ನೇ ಪ್ರತಿವಾದಿ 2 ಮನೆಯಲ್ಲಿ ವಾಸವಾಗಿರುತ್ತಾರೆ. 1 ನೇ ಪ್ರತಿವಾದಿಯ ತಂದೆಯ ಮನೆ ಪುತ್ತೂರು ತಾಲೂಕು ಮಂಜಲುಪಡ್ಪು ವಿನ ಹತ್ತಿರ ವಾಸವಾಗಿದ್ದಾರೆ . ಸದರಿ ಪ್ರದೇಶ ಪುತ್ತೂರು ಮಂಗಳೂರು ರಸ್ತೆಯಲ್ಲಿ ಸಿಗುತ್ತದೆ ಎಂದರೆ ಸರಿ. ನಿಡ್ವಳ್ಳಿ ಗ್ರಾಮ ರೆಂಜದಿಂದ ಮುಡ್ಪುನಡ್ಕ ಕಡೆ ಮತ್ತು ಅಲ್ಲಿಂದ ಸುಳ್ಯಪದವು ಕಡೆ ರಸ್ತೆಯಲ್ಲಿ ಬರುತ್ತದೆ . ಮುಡ್ಪುನಡ್ಕ ದಿಂದ ಒಂದು ಕಿ.ಮೀ. ಹೋಗುವಾಗ ಕಳೆಂಜಿ ಎಂಬ ಪ್ರದೇಶ ಸಿಗುತ್ತದೆ. ಅಲ್ಲಿಂದ ಶಾಂತದುರ್ಗ ದೇವಸ್ಥಾನ ಸಿಗುತ್ತದೆ. ಬರಂಬುಟ್ಟು ಎಂಬ ಸ್ಥಳದ ವರೆಗೊ ನಮ್ಮ ಮಾರ್ಗ ಇರುತ್ತದೆಯೇ ಎಂದರೆ ನಮ್ಮ ಮನೆಯವರೆಗೂ ಇರುತ್ತದೆ ಎಂದು ಹಾಗೂ ಸದರಿ ಮಾರ್ಗವನ್ನು ನನ್ನ ಮನೆಗೆ ನಾನೇ ಮಾಡಿಕೊಂಡಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಮಾರ್ಗವನ್ನು ಸುಮಾರು 2012 ರಲ್ಲಿ ಮಾಡಿರುತ್ತೇನೆ. ಸದರಿ ಮಾರ್ಗ ಸರ್ಕಾರಿ ಜಾಗದ ಮೇಲೆ ಹೋಗುತ್ತದೆ. ಸದರಿ ಸರ್ಕಾರಿ ಜಾಗದ ಸರ್ವೆ ನಂಬರ್ ನನಗೆ ನೆನಪಿಲ್ಲ.

ದಾವಾ ಅನುಸೂಚಿ ಸ್ವತ್ತು ನನಗೆ ಅಕ್ರಮ-ಸಕ್ರಮದಡಿಯಲ್ಲಿ ಬಂದಿರುತ್ತದೆ. ಅಕ್ರಮಸಕ್ರಮದಡಿಯಲ್ಲಿಮಂಜೂರು ಮಾಡಿದ್ದಲ್ಲಿ ತಾಲೂಕು ಕಚೇರಿಯಲ್ಲಿ ಅದರ ಬಗ್ಗೆ ದಾಖಲೆಗಳು ಇರುತ್ತದೆ ಎಂದರೆ ಸರಿ. ಸದರಿ ಅಕ್ರಮ ಸಕ್ರಮದಡಿಯಲ್ಲಿ ಮಂಜೂರಾದ ಬಗ್ಗೆ ದಾಖಲೆ ನನ್ನ ಬಳಿ ಇರುತ್ತದೆ. ಸದರಿ ದಾಖಲೆಯಲ್ಲಿ ಸದರಿ ಮಾರ್ಗವನ್ನು ಕಾಣಿಸಿರುವುದಿಲ್ಲ. ನಾನು 2012 ರಲ್ಲಿ ಮಾಡಿದ ಮಾರ್ಗದ ಬಗ್ಗೆ ದಾಖಲೆ ಇಲ್ಲ. ಸರ್ಕಾರದ ಜಾಗದಲ್ಲಿ ನಾನು ಮಾರ್ಗ ಮಾಡುವ ಮೊದಲು ಸರ್ಕಾರದ ಅನುಮತಿಯನ್ನು ಪಡೆದುಕೊಂಡಿಲ್ಲ.

ಈ ದಾವಾ ದಾಖಲು ಮಾಡುವಾಗ 1 ನೇ ಪ್ರತಿವಾದಿ 2 ಕಡೆ ವಾಸವಾಗಿದ್ದರು. 2 ಮತ್ತು 3 ನೇ ಪ್ರತಿವಾದಿಯವರು ಸಹ 2 ಕಡೆ ವಾಸವಾಗಿದ್ದರು. ಸದರಿ ಪ್ರತಿವಾದಿಯವರು ಮಂಜಲುಪಡ್ಪು ಎಂಬಲ್ಲಿ ವಾಸವಾಗಿದ್ದಾರೆ ಎನ್ನಲು ದಾಖಲೆ ಇದೆಯಾ ಎಂದರೆ ಗೊತ್ತಿಲ್ಲ. ಮಂಜಲುಪಡ್ಪು ಮನೆಯ ಡೋರ್

ನಂಬರ್ ನನಗೆ ಗೊತ್ತಿಲ್ಲ. ಮಂಜಲುಪಡ್ಪು ಅವರ ಜಾಗ ನನಗೆ ಗೊತ್ತಿಲ್ಲ. ಅವರು ಮಂಜಲುಪಡ್ಪು ವಿನಲ್ಲಿ ವಾಸವಾಗಿದ್ದಾರೆ ಎಂದು ನಿಮಗೆ ಯಾರು ಹೇಳಿದ್ದು ಎಂದರೆ ಸಾಕ್ಷಿ ನಾನು ಅವರು ವಾಸವಾಗಿದ್ದಾರೆ ಎಂದು ಹೇಳಿಲ್ಲ, ಹೋಗಿ ಬರುತ್ತಿರುತ್ತಾರೆ ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಮಂಜಲುಪಡ್ಪುವಿಗೆ ಹೋಗಿ ಬರುತ್ತಾರೆ ಎಂಬುದನ್ನು ನನಗೆ ಯಾರು ಹೇಳಿಲ್ಲ, ನಮ್ಮ ಜಾಗದಿಂದ ಹೊರಗೆ ಹೋಗಿ ಬರುತ್ತಿದ್ದುದ್ದನ್ನು ನಾನೇ ನೋಡಿರುತ್ತೇನೆ. ಬರಂಬೋಟ್ಟುವಿನಿಂದ ಮಂಜಲುಪಡ್ಪು ವಿಗೆ ಎಷ್ಟು ದೂರ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಬರಂಬೊಟ್ಟು ಪ್ರದೇಶದಿಂದ ಪುತ್ತೂರಿಗೆ ಸುಮಾರು 21 ಕಿ.ಮೀ. ಅಂತರ ಇರುತ್ತದೆ. ನನ್ನ ಪ್ರಕಾರ ಪ್ರತಿವಾದಿಯವರು ಬರಂಬೊಟ್ಟುವಿನಲ್ಲಿ ಸುಮಾರು 30 ವರ್ಷಕ್ಕಿಂತ ಮೇಲ್ಪಟ್ಟು ವಾಸವಾಗಿದ್ದಾರೆ. ದಾವಾ ಎ ಅನುಸೂಚಿ ಸ್ವತ್ತಿನಲ್ಲಿ ನಾನು ಸುಮಾರು 30 ವರ್ಷದಿಂದ ವಾಸವಾಗಿದ್ದೆ. ಈಗ 4 ವರ್ಷದಿಂದ ಹೊಸ ಮನೆ ಕಟ್ಟಿಕೊಂಡು ವಾಸವಾಗಿದ್ದೇನೆ. ಹಳೆ ಮನೆಯಿಂದ ಹೊಸಮನೆಗೆ ಎಷ್ಟು ದೂರ ಅಂತರದಲ್ಲಿ ಇರುತ್ತದೆ ಎಂದರೆ ಅಳತೆ ಗೊತ್ತಾಗುವುದಿಲ್ಲ. ದಾವಾ ಸ್ವತ್ತಿನಲ್ಲಿ ಇರುತ್ತದೆ ಎಂದು ಹೇಳುತ್ತಾರೆ.

ನಾನು 7 ನೇ ತರಗತಿ ವರೆಗೆ ಓದಿಕೊಂಡಿರುತ್ತೇನೆ. 1 ರಿಂದ 3 ನೇ ಪ್ರತಿವಾದಿಯವರು ಬರಂಬೊಟ್ಟು ಪ್ರದೇಶದಲ್ಲಿ ಒಂದೇ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ನಮ್ಮ ಹಳೇ ಮನೆಯಿಂದ ಪ್ರತಿವಾದಿಯವರ ಮನೆಗೆ ಸುಮಾರು ಅಂದಾಜು ಅರ್ಧ ಕಿ.ಮೀ . ಆಗಬಹುದು. 1 ನೇ ಪ್ರತಿವಾದಿಯ ಮನೆಗೆ ಹೋಗಲು ತಲೆಂಜಿ ಪ್ರದೇಶದಿಂದ ಸರ್ಕಾರಿ ಜಾಗದ ಮೂಲಕ ಅದರ ನಂತರ ದಾವಾ ಎ ಅನುಸೂಚಿ ಸ್ವತ್ತು ಹೊರತುಪಡಿಸಿ ಬೇರೆ ಜಾಗದ ಮೂಲಕ ಅವರಿಗೆ ರಸ್ತೆ ಇರುತ್ತದೆ ಸಾಕ್ಷಿಯು ಸ್ವತಃ ಮುಂದುವರಿದು ಲೀಲಾವತಿರವರ ಸಹೋದರ, ಶಿವಪ್ಪ ಗೌಡ ರವರ ಜಾಗದಲ್ಲಿ ರಸ್ತೆ ಇರುತ್ತದೆ ಎಂದು ಹೇಳುತ್ತಾರೆ. ಸದರಿ ಜಾಗ ಇರುವ ಬಗ್ಗೆ ಪ್ರತಿವಾದಿ ಎದುರುದಾವೆ ಸಲ್ಲಿಸುವಾಗ ಅದಕ್ಕೆ ಲಿಖಿತ ಹೇಳಿಕೆ ಸಲ್ಲಿಸುವ ಸಮಯದಲ್ಲಿ ಸದರಿ ವಿಚಾರವನ್ನು ಹೇಳಲಾಗಿದೆಯಾ ಎಂದರೆ ಸಾಕ್ಷಿ ಆಯುಕ್ತರು ಬಂದಾಗ ಬರೆದಿರುತ್ತಾರೆ ಎಂದು ಹೇಳುತ್ತಾರೆ. ಸದರಿ ವಿಚಾರವನ್ನು ನನ್ನ ವಕೀಲರಿಗೆ ನಾನು ತಿಳಿಸಿಲ್ಲ. ಸದರಿ ಶಿವಪ್ಪ ಗೌ

ಡರ ರವರ ಜಾಗದಲ್ಲಿ ದಾರಿ ಇದೆ ಎಂದು ಹೇಳಲು ನನ್ನ ಬಳಿ ದಾಖಲೆ ಇಲ್ಲ. ದಾವಾ ಎ ಅನುಸೂಚಿ ಸ್ವತ್ತು ಅಕ್ರಮಸಕ್ರಮದಡಿಯಲ್ಲಿ ಮಂಜೂರಾಗುವ ಮೊದಲು ಅದು ಕೂಡಾ ಸರ್ಕಾರಿ ಜಾಗ ಆಗಿತ್ತು ಎಂದರೆ ಸರಿ.

ಪ್ರತಿವಾದಿಯವರಿಗೆ ಓಡಾಡಲು ಒಂದೇ ರಸ್ತೆ ಮಾರ್ಗ ಇರುತ್ತದೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯವರಿಗೆ ತಲೆಂಜಿಯಿಂದ ದಾವಾ ಎ ಅನುಸೂಚಿ ಸ್ವತ್ತಿನ ಮೂಲಕ ಅವರ ಮನೆಗೆ ಓಡಾಡಲು ಮಾರ್ಗ ಇದೇ ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ತಲೆಂಜಿಯಿಂದ ದಾವಾ ಎ ಅನುಸೂಚಿ ಸ್ವತ್ತಿನ ಮೂಲಕ ಅವರ ಮನೆಗೆ ಓಡಾಡಲು ಅದೊಂದೇ ಮಾರ್ಗ ಇರುವುದು ಎಂದರೆ ಸರಿಯಲ್ಲ. ಶಿವಪ್ಪ ಗೌಡ ರ ಜಾಗದ ಮೂಲಕ ರಸ್ತೆ ಮಾರ್ಗ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೂಲಕ ಇರುವ ಮಾರ್ಗವನ್ನು ಸುಮಾರು 30 ವರ್ಷಗಳ ಹಿಂದಿನಿಂದಲೂ ಉಪಯೋಗಿಸಿಕೊಂಡು ಬರುತ್ತಿದ್ದರೂ ಎಂದರೆ ಸರಿಯಲ್ಲ. ನನಗೂ ಮತ್ತು ಪ್ರತಿವಾದಿಯವರಿಗೂ ಯಾವುದೇ ವೈಮನಸ್ಸು ಇರುವುದಿಲ್ಲ. ದಾವಾ ಆಸ್ತಿ ಅಕ್ರಮಸಕ್ರಮದಡಿಯಲ್ಲಿ ಮಂಜೂರಾದ ನಂತರ ಪ್ರತಿವಾದಿಯವರಿಗೆ ಇರುವ ರಸ್ತೆಯನ್ನು ಕೊಡಬಾರದು ಎಂದು ಹೇಳಿ ದುರುದ್ದೇಶದಿಂದ ಈ ದಾವಾ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಪ್ರತಿವಾದಿಯವರ ವಿರುದ್ಧ ಠಾಣೆಗೆ ದೂರು ನೀಡಿದಾಗ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಪೊಲೀಸರು ಸ್ಥಳ ತನಿಖೆಗೆ ಬರುವಾಗ ನಾನು ಹೇಳಿದ ಇನ್ನೊಂದು ಮಾರ್ಗವನ್ನು ಪೊಲೀಸರಿಗೆ ತೋರಿಸಿಲ್ಲ. 1 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ರಸ್ತೆಯ ಉಪಯೋಗದ ಹಕ್ಕನ್ನು ಬಿಟ್ಟರೆ ಬೇರೆ ಯಾವುದೇ ಪರಿಹಾರ ಕೇಳುತ್ತಿಲ್ಲ ಎಂದರೆ ನನ್ನ ಜಾಗಕ್ಕೆ ಬಲತ್ಕಾರವಾಗಿ ಬರುತ್ತಿರುತ್ತಾರೆ. ಹಾಗಾಗಿ ಸದರಿ ದಾವಾವನ್ನು ಸಲ್ಲಿಸಿರುತ್ತೇನೆ. ದಾವಾ ದಾಖಲು ಮಾಡಿದ ನಂತರ 1 ನೇ ಪ್ರತಿವಾದಿಯ ಓಡಾಡುವ ರಸ್ತೆ ಮಾರ್ಗಕ್ಕೆ ಅಡ್ಡಿಪಡಿಸುತ್ತಿರುತ್ತೇನೆ ಎಂದರೆ ಸರಿಯಲ್ಲ.

ವಸಂತ ಮತ್ತು ಚನಿಯ ನಾಯ್ಕ ಎಂಬುವವರು ನನ್ನ ನೆರೆಕರೆಯವರು. ವಸಂತ ಮತ್ತು ಚನಿಯ

ನಾಯ್ಕ ಅವರಿಗೆ ಅಕ್ರಮಸಕ್ರಮದಡಿಯಲ್ಲಿ ಆಸ್ತಿ ಮಂಜೂರಾದ ಬಗ್ಗೆ ಗೊತ್ತಿಲ್ಲ. . ದಾವಾ ದಾಖಲು ಮಾಡುವ ಸಮಯದಲ್ಲಿ ನಾನು ವಸಂತ ಮತ್ತು ಚನಿಯ ನಾಯ್ಕ ರವರು ಉತ್ತಮಬಾಂದವ್ಯ ಹೊಂದಿರುತ್ತೇವೆ ಎಂದರೆ ಸರಿಯಲ್ಲ. ನಾನು ವಸಂತ ಮತ್ತು ಚನಿಯ ನಾಯ್ಕ ರವರು ದಿನಾಂಕ 01-12-2012 ರಂದು 12.00 ಗಂಟೆ ಸಮಯದಲ್ಲಿ ಜೆಸಿಬಿ ತಂದು 1 ನೇ ಪ್ರತಿವಾದಿ ಮನೆಗೆ ಹೋಗುವ ಮಾರ್ಗಕ್ಕೆ ಕಣಿ ನಿರ್ಮಿಸಿರುತ್ತೇವೆ ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ಆಯುಕ್ತರನ್ನು ನೇಮಕ ಮಾಡಲು ಪ್ರತಿವಾದಿ ಅರ್ಜಿ ಸಲ್ಲಿಸಿದ ಬಗ್ಗೆ ತಿಳಿದಿಲ್ಲ. ಸದರಿ ಪ್ರತಿವಾದಿ ಮಧ್ಯಕಾಲೀನ ಅರ್ಜಿ ಸಂಖ್ಯೆ-4 ನ್ನು ಸಲ್ಲಿಸಿದ್ದು ಅದಕ್ಕೆ ನಾನು ಆಕ್ಷೇಪಣೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರತಿವಾದಿ ಹಾಜರುಮಾಡಿರುವ ಫೋಟೋವನ್ನು ನಾನು ನೋಡಿ ತಿಳಿದುಕೊಂಡಿಲ್ಲ. 3 ನೇ ಪ್ರತಿವಾದಿಯ ಪರಿಚಯ ಇರುತ್ತದೆ. ಆತನ ಫೋಟೋವನ್ನು ತೋರಿಸಿದರೆ ನನಗೆ ಈಗ ತೋರಿಸಿದ ಫೋಟೋ ಗುರುತು ಹಿಡಿಯಲು ಸಾಧ್ಯವಿಲ್ಲ.

ಪ್ರತಿವಾದಿಯ ಪರ ವಕೀಲರು ಮುಂದುವರಿದ ವಿಚಾರಣೆಗಾಗಿ ಕಾಲವಕಾಶ ಕೋರಿದ್ದರಿಂದ ಅನುಮತಿ ನೀಡಿ ಮುಂದೂಡಲಾಯಿತು.

ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ, ಹೇಳಿ, ಕೇಳಿ, ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು, ದ.ಕ.